shaping the way cities move

ನಗರ ಭೂ ಸಾರಿಗೆ ನಿರ್ದೇಶನಾಲಯs
ನಗರಾಭಿವೃದ್ಧಿ ಇಲಾಖೆ
ಕರ್ನಾಟಕ ಸರ್ಕಾರ

ಸಂಖ್ಯೆ:DULT-TECH/38/2025 ದಿನಾಂಕ:02.06.2026

**ನಗರ ಭೂ ಸಾರಿಗೆ ನಿರ್ದೇಶನಾಲಯದಿಂದ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಸಲುವಾಗಿ ನಗರ ಮೊಬಿಲಿಟಿ ಯೋಜನೆ, ವಿನ್ಯಾಸ ಮತ್ತು ಕ್ರಿಯಾ ಸಂಶೋಧನಾ ಕೇಂದ್ರದಲ್ಲಿ ಗುತ್ತಿಗೆ ಆಧಾರದ ಮೇಲೆ ಬೇಕಿರುವ ಸಿಬ್ಬಂದಿಗಳ ನೇಮಕಾತಿಗಾಗಿ ಅಧಿಸೂಚನೆ**

ನಗರ ಭೂ ಸಾರಿಗೆ ನಿರ್ದೇಶನಾಲಯ (DULT), ಕರ್ನಾಟಕ ಸರ್ಕಾರ ಕಲಬುರಗಿಯಲ್ಲಿ Centre for Urban Mobility Planning, Design and Action Research ಕೇಂದ್ರವನ್ನು ಸ್ಥಾಪಿಸಿದ್ದು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (KKRDB) ಯಿಂದ ಸಹಾಯಾನುದಾನವನ್ನು ಒದಗಿಸಲಾಗುತ್ತಿದೆ. ಸದರಿ ಕೇಂದ್ರವು ನಿರ್ವಹಿಸಲಾಗುತ್ತಿರುವ ಯೋಜನೆಗಳನ್ನು ಬೆಂಬಲಿಸಲು ನಗರ ಭೂ ಸಾರಿಗೆ ನಿರ್ದೇಶನಾಲಯವು ಈ ಕೆಳಕಂಡ ಹುದ್ದೆಗಳಿಗೆ ಪ್ರತಿಭಾನ್ವಿತ ಮತ್ತು ನುರಿತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಹುದ್ದೆಗಳು ಗುತ್ತಿಗೆ ಆಧಾರಿತವಾಗಿದ್ದು ಕಾರ್ಯಸ್ಥಾನವು ಕಲಬುರಗಿಯಾಗಿರುತ್ತದೆ. ಆರಂಭಿಕ ಒಪ್ಪಂದದ ಅವಧಿ ಒಂದು ವರ್ಷವಾಗಿದ್ದು, ಉತ್ತಮವಾಗಿ ಕಾರ್ಯನಿರ್ವಹಿಸುವ ಉದ್ಯೋಗಿಗಳಿಗೆ ಯೋಜನೆಯ ಅವಶ್ಯಕತೆಗಳಿಗೆ ಅನುಗುಣವಾಗಿ ಸೇವಾ ಅವಧಿಯನ್ನು ವಿಸ್ತರಿಸುವ ಸಾಧ್ಯತೆ ಇರುತ್ತದೆ. ಅಭ್ಯರ್ಥಿಗಳು ತಮ್ಮ ಈ-ಮೇಲ್ ಐಡಿ ಬಳಸಿ ಈ ಕೆಳಕಂಡ ಲಿಂಕ್ ಮೂಲಕ ಮಾತ್ರ ಅರ್ಜಿ ಸಲ್ಲಿಸಬೇಕು. ಬೇರೆ ಯಾವುದೇ ವಿಧಾನದ ಮೂಲಕ ಸಲ್ಲಿಸಲಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 15.06.2026ರಂದು ಸಂಜೆ 5:30 (IST).

| ಕ್ರ. ಸಂ. | ಹುದ್ದೆಗಳು | ಅನುಭವ | ಖಾಲಿ ಇರುವ ಹುದ್ದೆಗಳ ಸಂಖ್ಯೆ | ಸಂಭಾವನೆ | ಅರ್ಜಿ ಸಲ್ಲಿಸಲು ಲಿಂಕ್ |
|---|---|---|---|---|---|
| 1) | ಅಸೋಸಿಯೇಟ್ ಸಾರಿಗೆ ಯೋಜಕರು | 3-6 ವರ್ಷಗಳು | 02 | ರೂ.61000/- – ರೂ.84592/- | ಅರ್ಜಿ ಸಲ್ಲಿಸಲು ಲಿಂಕ್ |
| 2) | ಕ್ಯಾಡ್ ಆಪರೇಟರ್ | 3-6 ವರ್ಷಗಳು | 01 | ರೂ.50000/- – ರೂ.73216/- | ಅರ್ಜಿ ಸಲ್ಲಿಸಲು ಲಿಂಕ್ |

ಹುದ್ದೆಗಳಿಗಾಗಿ ಬೇಕಾದ ವಿದ್ಯಾರ್ಹತೆ ಹಾಗೂ ಅನುಭವಗಳನ್ನು ಈ ಕೆಳಗೆ ನೀಡಲಾಗಿದೆ.

1. **ಅಸೋಸಿಯೇಟ್ ಸಾರಿಗೆ ಯೋಜಕರು:**

**ಪ್ರಮುಖ ಜವಾಬ್ದಾರಿಗಳು:**

- ಗುಣಮಟ್ಟದ ಕಾರ್ಯವನ್ನು ಗಮನದಲ್ಲಿಟ್ಟುಕೊಂಡು, ವೇಳಾಮಿತಿಯೊಳಗೆ, ವಿನ್ಯಾಸ ಮತ್ತು ದತ್ತಾಂಶ ಸಂಗ್ರಹಣೆಯನ್ನು ಕಾರ್ಯಗತಗೊಳಿಸುವುದು.
- ನಗರ ಪ್ರದೇಶಗಳಲ್ಲಿ ಮೋಟಾರು-ರಹಿತ ಮತ್ತು ಸಾರ್ವಜನಿಕ ಸಾರಿಗೆ ಮೂಲಸೌಕರ್ಯ ವ್ಯವಸ್ಥೆಗಳ ಅಭಿವೃದ್ಧಿಗಾಗಿ ವಿನ್ಯಾಸಗಳನ್ನು ಅಭಿವೃದ್ಧಿಗೊಳಿಸುವುದು.
- ಮೋಟಾರು ರಹಿತ ಸಾರಿಗೆ, ಸಾರ್ವಜನಿಕ ಸಾರಿಗೆ, ಮೊಬಿಲಿಟಿ ಹಂಚಿಕೆ (mobility-as-a-service), ಬಹು-ಮಾದರಿ ಏಕೀಕರಣ ಮತ್ತು ಬೇಡಿಕೆ ನಿರ್ವಹಣೆ ವ್ಯವಸ್ಥೆಗಾಗಿ ಉತ್ತಮ ಅಭ್ಯಾಸಗಳ ಮೂಲಕ ಯೋಜನೆ ಮತ್ತು ಯೋಜನಾ ಅಭಿವೃದ್ಧಿಗೆ ಉತ್ತಮ ಗುಣಮಟ್ಟದ ಸಂಶೋಧನೆ ನಡೆಸುವುದು.
- ನಗರ ಮಟ್ಟದಲ್ಲಿನ, ಇತರ ಇಲಾಖೆಗಳು, ಸರ್ಕಾರೇತರ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು ಮತ್ತು ಸರ್ಕಾರಿ ಸಂಸ್ಥೆಗಳೊಂದಿಗೆ ಸಹಕರಿಸುವುದು.
- ತಾಂತ್ರಿಕ ಲೇಖನಗಳು, ನೀತಿ ವಿಶ್ಲೇಷಣಾ ಟಿಪ್ಪಣಿಗಳು, ಸಂಶೋಧನಾ ವರದಿಗಳು, ಪ್ರಾತ್ಯಕ್ಷಿಕೆಗಳು, ಇತರ ಜ್ಞಾನ ಉತ್ಪನ್ನಗಳು ಮತ್ತು ದಸ್ತಾವೇಜಿನ ಸಾಮಗ್ರಿಗಳನ್ನು ತಯಾರಿಸುವುದು.
- ಸಮಗ್ರ ಯೋಜನಾ ಪ್ರಕ್ರಿಯೆಗಳನ್ನು ಅಭಿವೃದ್ಧಿಪಡಿಸಲು ಮತ್ತು ಅಂತರ-ವಲಯ ಸಹಯೋಗವನ್ನು ಬಲಪಡಿಸಲು ವಿವಿಧ ಸಂಸ್ಥೆಗಳು ಮತ್ತು ಪರಿಣತಿಯ ವಲಯಗಳೊಂದಿಗೆ ಸಭೆಗಳನ್ನು ಕರೆಯುವ ಸಂಬಂಧ ಕೇಂದ್ರ ಕಚೇರಿ ಸಿಬ್ಬಂದಿಗಳಿಗೆ ಬೆಂಬಲ ನೀಡುವುದು.
- ಕಲ್ಯಾಣ ಕರ್ನಾಟಕ ಪ್ರದೇಶದ ವ್ಯಾಪ್ತಿಯೊಳಗೆ ಅಗತ್ಯಗೆ ತಕ್ಕಂತೆ ಸ್ಥಳ ವೀಕ್ಷಣೆ ಹಾಗೂ ಸಮಾಲೋಚನೆ ಕೈಗೊಳ್ಳುವುದು.
- ಆಯುಕ್ತರು/ವಿಶೇಷಾಧಿಕಾರಿ, ನ.ಭೂ.ಸಾ.ನಿ ಇವರು ವಹಿಸುವ ಇನ್ನಿತರೆ ಜಾವಾಬ್ದಾರಿಗಳನ್ನು ನಿರ್ವಹಿಸುವುದು.

**ಅವಶ್ಯಕತೆಗಳು:**

- ಸ್ನಾತಕೋತ್ತರ ಪದವಿ ಅಥವಾ ಸಾರಿಗೆ ಯೋಜನೆ/ಇಂಜಿನಿಯರಿಂಗ್‌ದೊಂದಿಗೆ ಅಥವಾ ತತ್ಸಮಾನ ಪದವಿ ಹೊಂದಿರತಕ್ಕದ್ದು.
- ಯೋಜನೆ/ ವಿನ್ಯಾಸ/ ಅನುಷ್ಠಾನ/ ನಗರ ಸಾರಿಗೆ ವ್ಯವಸ್ಥೆಗಳಲ್ಲಿ ಸಂಶೋಧನೆಯ ಪೂರ್ಣಾವಧಿಯ ಕಾರ್ಯಗಳಲ್ಲಿ 3-6 ವರ್ಷಗಳ ಅನುಭವವನ್ನು ಹೊಂದಿರತಕ್ಕದ್ದು.
- ನಗರ ಸಾರಿಗೆ ಯೋಜನೆಗಳಿಗೆ ಅಗತ್ಯವಾದ ಸಂಚಾರ ದಟ್ಟಣೆ ಗಣನೆ, ಅಭಿಪ್ರಾಯ ಸಮೀಕ್ಷೆಗಳು, ಮನೆ ಸಮೀಕ್ಷೆಗಳು, O-D ಸಮೀಕ್ಷೆಗಳು ಇತ್ಯಾದಿ ಸಾರಿಗೆ ಸಂಬಂಧಿತ ದತ್ತಾಂಶ ಸಂಗ್ರಹ ಚಟುವಟಿಕೆಗಳನ್ನು ಯೋಜಿಸಿ ನಿರ್ವಹಿಸಿರತಕ್ಕದ್ದು.
- ನಗರ ಸಾರಿಗೆಗೆ ಸಂಬಂಧಿಸಿದ ಗುಣಾತ್ಮಕ ಮತ್ತು ಪರಿಮಾಣಾತ್ಮಕ ವಿಶ್ಲೇಷಣಾತ್ಮಕ ವಿಧಾನಗಳನ್ನು ಬಳಸುವ ಸಾಮರ್ಥ್ಯ; ನಗರ ಸಾರಿಗೆ ದತ್ತಾಂಶಗಳ ಸಂಖ್ಯಾಶಾಸ್ತ್ರೀಯ (familiarity with statistical analysis) ವಿಶ್ಲೇಷಣೆ, ಸೂಕ್ಷ್ಮ ಮತ್ತು ಸ್ಥೂಲ ಸಿಮ್ಯುಲೇಶನ್ ಮಾಡೆಲಿಂಗ್ ಮತ್ತು ಭೌಗೋಳಿಕ ಮಾಹಿತಿ ವ್ಯವಸ್ಥೆಗಳ ಪರಿಚಯದ ಸಾಮರ್ಥ್ಯ ಹೊಂದಿರತಕ್ಕದ್ದು.
- ತಾಂತ್ರಿಕ ಮಾಹಿತಿಯನ್ನು ಸ್ಪಷ್ಟ ಹಾಗೂ ಸಂಕ್ಷಿಪ್ತವಾಗಿ (ಪ್ರಾತ್ಯಕ್ಷಿಕೆಗಳು ಹಾಗೂ ವರದಿಗಳ) ಮೂಲಕ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಓದುವುದು, ಬರವಣಿಗೆ ಮತ್ತು ಮಾತನಾಡುವ ಸಾಮರ್ಥ್ಯ ಹೊಂದಿರತಕ್ಕದ್ದು.

2. **ಕ್ಯಾಡ್ ಆಪರೇಟರ್**

**ಪ್ರಮುಖ ಜವಾಬ್ದಾರಿಗಳು:**

- ನಗರ ಸಾರಿಗೆ ಮೂಲಸೌಕರ್ಯ ಸಂಬಂಧಿತ ಯೋಜನೆಗಳಲ್ಲಿ ಕಾರ್ಯನಿರ್ವಹಿಸಿ, ಸಂಬಂಧಿತ ಕೋಡ್‌ಗಳು ಮತ್ತು ಮಾನದಂಡಗಳ ಪ್ರಕಾರ ಉತ್ತಮ ಗುಣಮಟ್ಟದ ಪ್ರಸ್ತಾವನೆಗಳನ್ನು ತಯಾರಿಸುವುದು.
- ರೇಖಾಚಿತ್ರಗಳನ್ನು ತಯಾರಿಕೆಗಾಗಿ ಅಗತ್ಯವಿರುವ ದಿನಚರಿ ಮತ್ತು ನಿಯಮಿತ ಲೆಕ್ಕಾಚಾರಗಳನ್ನು ನಿರ್ವಹಿಸುವುದು.
- ಲೇಔಟ್‌ಗಳು ಮತ್ತು ರೇಖಾಚಿತ್ರಗಳನ್ನು ಪರಿಶೀಲಿಸಿ, ವಿಭಿನ್ನ ಭಾಗಗಳ ಪರಸ್ಪರ ಸಂಬಂಧ ಹಾಗೂ ಸಂಪೂರ್ಣ ಚಿತ್ರಣದ ಸಮನ್ವಯತೆಯನ್ನು ಖಚಿತಪಡಿಸಿಕೊಳ್ಳುವುದು.
- ನಗರ ಯೋಜಕರ/ಸಾರಿಗೆ ಯೋಜಕರ/ವಿನ್ಯಾಸಕರಿಂದ ಸ್ವೀಕರಿಸಲಾದ ಕಾರ್ಯಗಳನ್ನು ಸಮಯಕ್ಕೆ ಪೂರಕವಾಗಿ ಪೂರ್ಣಗೊಳಿಸುವುದು.
- ಕೆಲಸದ ಜವಾಬ್ದಾರಿಯ ನಿರ್ವಹಿಸಿ ಕಡಿಮೆ ಮತ್ತು ಮಧ್ಯಮ ಮಟ್ಟದ ಮೇಲ್ವಿಚಾರಣೆಯೊಂದಿಗೆ ಸ್ವತಂತ್ರವಾಗಿ ಕೆಲಸ ಮಾಡುವ ಸಾಮರ್ಥ್ಯ ಹೊಂದಿರಬೇಕು.
- ಮೌಖಿಕ ಮತ್ತು ದೃಶ್ಯ ಸೂಚನೆಗಳನ್ನು ಕಾರ್ಯನಿರ್ವಹಣಾ ಚಿತ್ರಣಗಳಾಗಿ ಗ್ರಾಫಿಕಲ್ ರೀತಿಯಲ್ಲಿ ಅನುವಾದಿಸುವುದು.
- ಆಯುಕ್ತರು/ವಿಶೇಷಾಧಿಕಾರಿ, ನ.ಭೂ.ಸಾ.ನಿ ಇವರು ವಹಿಸುವ ಇನ್ನಿತರೆ ಜಾವಾಬ್ದಾರಿಗಳು.

**ಅರ್ಹತೆಗಳು:**

- ಸಿವಿಲ್ ಇಂಜಿನಿಯರಿಂಗ್ ಪದವಿ ಅಥವಾ ಡಿಪ್ಲೊಮೊದಲ್ಲಿ ಪದವಿ ಹೊಂದಿರತಕ್ಕದ್ದು.
- ನಗರ ರಸ್ತೆ/ ಭೂ ಸಾರಿಗೆ ಯೋಜನೆಗಳಂತಹ ಪ್ರಮುಖ ನಗರ ಮೂಲಸೌಕರ್ಯಗಳಿಗೆ CAD ರೇಖಾಚಿತ್ರಗಳನ್ನು ತಯಾರಿಸುವಲ್ಲಿ 3 ರಿಂದ 6 ವರ್ಷಗಳ ವೃತ್ತಿಪರ ಅನುಭವ ಹೊಂದಿರತಕ್ಕದ್ದು.
- ಸಾಮಾನ್ಯ ಜೋಡಣೆ ರೇಖಾಚಿತ್ರಗಳು, ಯೋಜನೆ, ವಿಭಾಗಗಳು ಮತ್ತು ವಿವರಗಳು, ರಸ್ತೆ ಜಂಕ್ಷನ್‌ಗಳು, ರಸ್ತೆ ಗುರುತು ಮತ್ತು ಸಂಕೇತ (signage) ರೇಖಾಚಿತ್ರಗಳಿಗಾಗಿ ಪರಿಕಲ್ಪನೆ/ವಿವರವಾದ ವಿನ್ಯಾಸ ರೇಖಾಚಿತ್ರಗಳನ್ನು ರಚಿಸುವ ಸಾಮರ್ಥ್ಯ ಹೊಂದಿರಬೇಕು.
- ಆಟೋಕ್ಯಾಡ್‌ನ ಸಾಬೀತಾದ ಕಾರ್ಯ ಜ್ಞಾನ, ವಿಶೇಷವಾಗಿ ಎಕ್ಸ್-ರೆಫ್ಸ್‌ಗಳು, ಬ್ಲಾಕ್‌ಗಳು, ಲೇಯರ್‌ಗಳು, ಆಯಾಮ, ಲೇಬಲಿಂಗ್, ಶೀಟ್ ಲೇಔಟ್‌ಗಳ ಬಳಕೆ ಮತ್ತು ಸಂಬಂಧಿತ ಡ್ರಾಯಿಂಗ್ ಕೋಡ್‌ಗಳು ಮತ್ತು ಮಾನದಂಡಗಳೊಂದಿಗೆ ಜ್ಞಾನ ಹೊಂದಿರಬೇಕು.
- ಆಟೋಲಿಸ್ಪ್ (AutoLisp), ಆಟೋಟರ್ನ್ (AutoTurn), ಸಿವಿಲ್ 3D/ರಸ್ತೆ ವಿನ್ಯಾಸ ಸಾಫ್ಟ್‌ವೇರ್ ಜ್ಞಾನವು ಅಪೇಕ್ಷಣೀಯವಾಗಿದೆ.
- ಕನ್ನಡ ಭಾಷೆಯಲ್ಲಿ ಪ್ರಾವೀಣ್ಯತೆ ಹೊಂದಿರುವುದು ಅಗತ್ಯವಾಗಿದೆ.